ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ 208 ವರ್ಗಾವಣೆ 2017-18 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:09.06.2017

## ಸುತ್ತೋಲೆ

ವಿಷಯ: 2017-18ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರು ಕೋರಿಕೆ ವರ್ಗಾವಣೆಗಳಲ್ಲಿ ವಿಶೇಷ ಪ್ರಕರಣಗಳ ಕೌನ್ಸಲಿಂಗ್ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:SAMVYASHAE 69 SHASANA 2012, ದಿನಾಂಕ:08.05.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 154 ಡಿಸಿಇ 2013 ದಿನಾಂಕ:01.07.2014.
3. ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ:31.05.2017.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(3)ರ ಸುತ್ತೋಲೆಯಲ್ಲಿ ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದ್ದು, ವರ್ಗಾವಣೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಕೋರಿಕೆ ವರ್ಗಾವಣೆಯ ಅರ್ಜಿಗಳಲ್ಲಿ ವಿಶೇಷ ಪ್ರಕರಣಗಳ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಾಗೂ ಲಭ್ಯವಿರುವ ಖಾಲಿಹುದ್ದೆಗಳ ಅಂತಿಮ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಸದರಿ ಪಟ್ಟಿಯನುಸಾರ ಅರ್ಹತೆ ಹೊಂದಿರುವ ಸಿಬ್ಬಂದಿಗಳು **ದಿನಾಂಕ:12/06/2017ರಂದು ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು** ಇಲ್ಲಿನ ಸಭಾಂಗಣದಲ್ಲಿ **ಬೆಳಗ್ಗೆ 10.30ಗಂಟೆಗೆ** ವರ್ಗಾವಣೆ ಕೌನ್ಸಲಿಂಗ್‌ಗೆ ವಿಶೇಷ ಪ್ರಕರಣಗಳಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳು ಹಾಗೂ ಪ್ರಾಂಶುಪಾಲರಿಂದ ಧೃಢೀಕರಿಸಲ್ಪಟ್ಟ ಒಂದು ಝೆರಾಕ್ಸ್ ಪ್ರತಿಯೊಂದಿಗೆ ತಪ್ಪದೆ ಹಾಜರಾಗತಕ್ಕದ್ದು.

ವರ್ಗಾವಣೆ ಕೌನ್ಸಲಿಂಗ್‌ನಲ್ಲಿ ಅನುಸರಿಸಲಾಗುವ ಮಾರ್ಗಸೂಚಿಗಳು:

1. ವೃಂದದಲ್ಲಿ ಮಂಜೂರಾದ ಹುದ್ದೆಗಳ ಶೇ.1 ರ ಮಿತಿಗೊಳಪಟ್ಟು ಕಡ್ಡಾಯ ವರ್ಗಾವಣೆಯಲ್ಲಿ ಈಗಾಗಲೇ ಪರಿಗಣಿಸಲಾಗಿರುವ ವಿಶೇಷ ಪ್ರಕರಣಗಳ ಸಂಖ್ಯೆಯನ್ನು ಕಳೆದು ಬಾಕಿ ಉಳಿಯುವಷ್ಟು ಸಂಖ್ಯೆಯಲ್ಲಿ ಮಾತ್ರ ಕೋರಿಕೆ ವರ್ಗಾವಣೆಯಲ್ಲಿ ವಿಶೇಷ ಪ್ರಕರಣಗಳನ್ನು ಪರಿಗಣಿಸಲಾಗುವುದು. ಅದರಂತೆ ವಿವರಗಳು ಈ ಕೆಳಕಂಡಂತಿವೆ: ಉಪನ್ಯಾಸಕರು

| ವಿವರಗಳು | ಒಟ್ಟು ಮಾಡಬಹುದಾದ ವರ್ಗಾವಣೆಗಳು | | ಈಗಾಗಲೇ ಮಾಡಲಾಗಿರುವ ಕಡ್ಡಾಯ ವರ್ಗಾವಣೆಗಳು | | ಮಾಡಬೇಕಾಗಿರುವ ಕೋರಿಕೆ ವರ್ಗಾವಣೆಗಳು | |
|---|---|---|---|---|---|---|
| | ರಾಜ್ಯ | ಹೆಚ್‌ಕೆ | ರಾಜ್ಯ | ಹೆಚ್‌ಕೆ | ರಾಜ್ಯ | ಹೆಚ್‌ಕೆ |
| 1. ಅಂಗವಿಕಲ ಪ್ರಕರಣಗಳು | 63 | 11 | 1 | 1 | 62 | 10 |
| 2. ತೀವ್ರತರ ಕಾಯಿಲೆ ಪ್ರಕರಣಗಳು | 63 | 11 | 5 | 1 | 58 | 10 |
| 3. ಪತಿಪತ್ನಿ ಪ್ರಕರಣಗಳು | 63 | 11 | 21 | 2 | 42 | 9 |
| 4. ವಿಧವಾ ಪ್ರಕರಣಗಳು | 63 | 11 | 4 | 0 | 59 | 11 |

2. ಮೇಲ್ಕಾಣಿಸಿದಂತೆ ಕೋರಿಕೆ ವರ್ಗಾವಣೆಯಲ್ಲಿ ಒಟ್ಟೂ 42 (ರಾಜ್ಯ ವೃಂದ)+9 (ಹೆಚ್ಕೆ ವೃಂದ) ಪತಿ-ಪತ್ನಿ ಪ್ರಕರಣಗಳನ್ನು ಮಾತ್ರ ಪರಿಗಣಿಸಬಹುದಾಗಿದ್ದು, ಎಲ್ಲಾ ಮೂರು ವಲಯಗಳಲ್ಲಿ ಸರಿಸಮನಾಗಿ ಹಂಚಿ ಪ್ರತಿ ವಲಯದಲ್ಲಿ 14 (ರಾಜ್ಯ ವೃಂದ)+3 (ಹೆಚ್ಕೆ ವೃಂದ) ಪತಿ, ಪತ್ನಿ ಪ್ರಕರಣಗಳನ್ನು ಪರಿಗಣಿಸಲಾಗುವುದು.

3. ವಿಶೇಷ ಪ್ರಕರಣಗಳಲ್ಲಿ ಗರಿಷ್ಠ ಮಿತಿಗಿಂತ ಕಡಿಮೆ ವರ್ಗಾವಣೆಗಳಾದಲ್ಲಿ ಗರಿಷ್ಠ ಮಿತಿ ಮತ್ತು ಆಗಿರುವ ವರ್ಗಾವಣೆಗಳ ವ್ಯತ್ಯಾಸವನ್ನು ಮಾಡಬಹುದಾದ ಸಾಮಾನ್ಯ ಪ್ರಕರಣಗಳಿಗೆ ಸೇರಿಸಿಕೊಳ್ಳಲಾಗುವುದು.

4. 371 ಜೆ ರಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದ ರಚನೆಯ ಸಂದರ್ಭದಲ್ಲಿ ರಾಜಧಾನಿ ಪ್ರದೇಶವಾದ ಬೆಂಗಳೂರಿನಲ್ಲಿ ಶೇ.8ರಷ್ಟು ಹುದ್ದೆಗಳನ್ನು ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲರಿಸಿದ್ದು ಸದರಿ ಹುದ್ದೆಗಳು ಖಾಲಿ ಇಲ್ಲದ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಸ್ಥಳಾಂತರಿಸಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ ಸಿಬ್ಬಂದಿಗಳನ್ನು ಸದರಿ ಹುದ್ದೆಗಳಲ್ಲಿ ನಿಯುಕ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ ಕೆಎಟಿ ತಡೆಯಾಜ್ಞೆ ಸ್ವೀಕೃತವಾದ ಕಾರಣ ಆದೇಶ ಅನುಷ್ಠಾನಗೊಳಿಸಲಾಗಿರುವುದಿಲ್ಲ. 2015-16, 2016-17 ನೇ ಸಾಲಿನ ವರ್ಗಾವಣೆಗಳಲ್ಲಿ ಸದರಿ 8% ಹುದ್ದೆಯನ್ನು ಕೌನ್ಸೆಲಿಂಗ್‌ನಲ್ಲಿ ಪ್ರದರ್ಶಿಸಲಾಗಿರುವುದಿಲ್ಲ. ಅದರಂತೆ ಈ ಸಾಲಿನಲ್ಲಿಯೂ ಖಾಲಿ ಹುದ್ದೆಗಳಲ್ಲಿ ಸದರಿ 8% ಹುದ್ದೆಗಳನ್ನು ಕೌನ್ಸೆಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದಿಲ್ಲ.

<u>ಸೂಚನೆ:</u>

1. **ಕೌನ್ಸಿಲಿಂಗ್‌ಗೆ ಆಹ್ವಾನಿಸಲಾಗಿರುವ ಅಭ್ಯರ್ಥಿಗಳು ಮಾತ್ರವೇ ಸ್ಥಳದಲ್ಲಿ ಹಾಜರಿರತಕ್ಕದ್ದು.**
2. **ಎರಡು ವರ್ಷದೊಳಗಿನ ಮಕ್ಕಳನ್ನು ಹೊಂದಿರುವ ಸಿಬ್ಬಂದಿಗಳಿಗೆ ಮಾತ್ರ ಜೊತೆಗೆ ಒಬ್ಬರನ್ನು ಕೌನ್ಸಿಲಿಂಗ್ ಸ್ಥಳದಲ್ಲಿ ಕರೆತರಲು ಅವಕಾಶ ನೀಡಿದೆ.**
3. **ಅನೇಕ ಸಿಬ್ಬಂದಿಗಳು ಅಪ್‌ಲೋಡ್ ಮಾಡಿರುವ ದಾಖಲೆಗಳು ಸ್ಪಷ್ಟವಾಗಿಲ್ಲದ ಕಾರಣ ಕೌನ್ಸೆಲಿಂಗ್‌ನಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲಿಸಿದ ನಂತರದಲ್ಲಿ ವಿಶೇಷ ಪ್ರಕರಣಗಳಲ್ಲಿ ಪರಿಗಣಿಸಲು ಅವಕಾಶವಿದ್ದಲ್ಲಿ ಮಾತ್ರ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು. ದಾಖಲಾತಿಗಳು ನಿಯಮಾನುಸಾರವಾಗಿ ಇಲ್ಲದ ಪಕ್ಷದಲ್ಲಿ ಅಂತಿಮ ಪಟ್ಟಿಯಲ್ಲಿ ಪ್ರಕಟಿಸಲಾಗಿದ್ದಾಗ್ಯೂ ಕೂಡ ಕೌನ್ಸಲಿಂಗ್‌ನಲ್ಲಿ ವಿಶೇಷ ಪ್ರಕರಣಗಳಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.**

9/6/17

**ಕಾಲೇಜು ಶಿಕ್ಷಣ ಆಯುಕ್ತರು**

<u>ಇವರಿಗೆ:</u>

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ತುರ್ತು ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಗತ್ಯ ಕ್ರಮಕ್ಕಾಗಿ.
4. ಪ್ರಾಂಶುಪಾಲರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು - ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
5. ಕಛೇರಿ ಪ್ರತಿ.

*circular Transfer 17-18*

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕಾಶಿಇ 208 ವರ್ಗಾವಣೆ 2017-18 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 09/06/2017

## ಆದೇಶ

ವಿಷಯ: 2017-18 ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರು ವರ್ಗಾವಣೆ ಬಗ್ಗೆ.

** ** **

2017-18ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ, ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಗ್ರಂಥಪಾಲಕರುಗಳ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲು ಈ ಕೆಳಕಂಡ ಸಹ/ಸಹಾಯಕ ಪ್ರಾಧ್ಯಾಪಕರು ಹಾಗೂ ಸಿಬ್ಬಂಧಿಗಳನ್ನು ನಿಯೋಜಿಸಲಾಗಿದ್ದು, ಅವರುಗಳು ನಿಗದಿಪಡಿಸಿದ ದಿನಾಂಕದಂದು ***"ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು"*** ಇಲ್ಲಿ ನಡೆಯುವ ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಿದ್ದು, ಕೇಂದ್ರ ಕಛೇರಿಯ ಮಾಹಿತಿ ಅಧಿಕಾರಿಗಳು ಸೂಚಿಸುವ ಕಾರ್ಯಗಳನ್ನು ನಿರ್ವಹಿಸಲು ಆದೇಶಿಸಲಾಗಿದೆ.

| ಕ್ರ. ಸಂ. | ಹೆಸರು, ಪದನಾಮ ಮತ್ತು ಕಾಲೇಜಿನ ವಿಳಾಸ | ಕೌನ್ಸಿಲಿಂಗ್ ದಿನಾಂಕಗಳು |
|---|---|---|
| 01 | ಶ್ರೀಮತಿ.ವಿದ್ಯಾ ಎಸ್ ನಾಯಕ್, ಜಂಟಿನಿರ್ದೇಶಕರು (ಶೈಕ್ಷಣಿಕ) ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | 12.06.2017 ಬೆಳಗ್ಗೆ 10.30 ಗಂಟೆಗೆ |
| 02 | ಶ್ರೀಮತಿ.ಕಾವಲಮ್ಮ, ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು | |
| 03 | ಶ್ರೀ ಸುಮಂತ್.ಎಸ್. ಗಣಕ ವಿಜ್ಞಾನ ಸಹಾಯಕ ಪ್ರಾಧ್ಯಾಪಕರು, ಶ್ರೀಮತಿ ವಿಹೆಚ್‌ಡಿ ಗೃಹ ವಿಜ್ಞಾನ ಕಾಲೇಜು, ಬೆಂಗಳೂರು | |
| 04 | ಶ್ರೀಮತಿ ಲೀನಾ ಸ್ವರ್ಣ ದೇವಿ.ಬಿ. ಗಣಕ ವಿಜ್ಞಾನ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | |
| 05 | ಶ್ರೀ ಶ್ರೀಕಾಂತ್, ದೈಹಿಕ ಶಿಕ್ಷಣ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು | |
| 06 | ಶ್ರೀ.ಮಣಿಕಂದನ್, ಗಣಕವಿಜ್ಞಾನ ಸಹಾಯಕ ಪ್ರಾಧ್ಯಾಪಕರು, ಕೇಂದ್ರಕಛೇರಿ, ಬೆಂಗಳೂರು | |

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:

1. ಮೇಲ್ಕಂಡ ಬೋಧಕರು/ಸಿಬ್ಬಂದಿಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಗತ್ಯ ಕ್ರಮಕ್ಕಾಗಿ.
3. ಮೇಲ್ಕಂಡ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
4. ಕಛೇರಿ ಪ್ರತಿ.